## ಸಮುದ್ರ ಮಥನ



### ಇನ್ನೂ ಹಾಸ್ಯಲೇಖನ ಇರಬೇಕಿತ್ತು

'ಹಾಸ್ಯ ಸಂಚಿಕೆ' (ಸುಧಾ, ಏ.6) ಗಮನ ಸೆಳೆಯಿತು. ಸಂಚಿಕೆಯ ಮುಖಪುಟ ಹರಿಸಿತು ನಗೆಹೊನಲು. 'ದೈರಿಗೊಂದು ಎಲ್ಲೆ ಎಲ್ಲಿದೆ?'(ಎನ್.ರಾಮನಾಥ್), ಶೀಘ್ರವೇ ಬರಲಿದೆ! (ಪ್ರಕಾಶ್ ಶೆಟ್ಟಿ), 'ಬ್ರೇಕಿಂಗ್ ನ್ಯೂಸ್' (ಕೃಷ್ಣ ಸುಬ್ಬರಾವ್) ನಗುವಿನ ಕಟ್ಟೆಯೊಡೆಯುವಂತೆ ಮಾಡಿತು. ಇನ್ನೊಂದಿಷ್ಟು ಹಾಸ್ಯ ಲೇಖನಗಳು ಇದ್ದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

—ಕೆ.ಪಿ. ರಾಮಗುಂಡಿ ಬೈಲಹೊಂಗಲ, ಸುಂದರ್ ಬೆಂಗಳೂರು, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಮೇ.ಗೋ.ಸುಬ್ಬಣ್ಣ ಮೇಗರವಳ್ಳಿ, ಬಾಳ್ಳುಪೇಟೆ ನೀಲಕಂಠಪ್ಪ ಹಾಸನ

### ಸಪ್ಪೆ ಎನಿಸಿತು

ಹಾಸ್ಯ ಸಂಚಿಕೆ ಎಂಬ ತಲೆಬರಹವನ್ನು ಹೊತ್ತು ತಂದ ಸಂಚಿಕೆಯಲ್ಲಿ ಹಾಸ್ಯವೇನಿಲ್ಲದೆ ಸಪ್ಪೆ ಎನಿಸಿತು. ಪ್ರತಿ ವರ್ಷ 'ಸುಧಾ'ದಲ್ಲಿ ಏಪ್ರಿಲ್ ತಿಂಗಳ ಮೊದಲ ಸಂಚಿಕೆ ಹಾಸ್ಯ ಲೇಖನಗಳು, ವ್ಯಂಗ್ಯಚಿತ್ರಗಳು, ಹಾಸ್ಯ ಚಟಾಕಿಗಳಿಂದ ತುಂಬಿರುತ್ತಿದ್ದವು. ಓದುಗರಿಗೆ ಖುಷಿ ಕೊಡುತ್ತಿದ್ದವು. ಆದರೆ ಈ ಸಲ ಹಾಗಾಗಲಿಲ್ಲ.

—ಶ್ರೀನಾಥ್ ಕೊನೇಟಿ ಬೆಂಗಳೂರು, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

### ವಿಚಾರಪೂರ್ಣ

'ನಿಮ್ಮೊಡನೆ'ಯಲ್ಲಿ 'ಅಭಿವೃದ್ಧಿಗೆ ಬೇಕಿದೆ ವೇಗೋತ್ಕರ್ಷ' ಬರಹ (ರಘುನಾಥ ಚ.ಹ.) ವಿಚಾರಪೂರ್ಣವಾಗಿದೆ.

—ಮಹಾವೀರ ಕಾಸರ ಶಿವಮೊಗ್ಗ

### ಕಬೂತರ್ ಸೋಜಿಗ!

'ಪಕ್ಷಿಪ್ರೇಮಿಗಳ ಕಬೂತರ್ ಖಾನಾ' (ಶ್ರೀನಿವಾಸ ಜೋಕಟ್ಟೆ) ಲೇಖನ ವಿಸ್ಮಯ ಹುಟ್ಟಿಸಿತು. ಬರೇ ಕಟ್ಟಡಗಳೇ ತುಂಬಿರುವ ಮುಂಬಯಿ ನಗರದಲ್ಲಿ ಲಕ್ಷ ಲಕ್ಷ ಪಾರಿವಾಳಗಳು ಜನರ ಜತೆಗೇ ವಾಸ ಇರುವುದು ಸೋಜಿಗ. ಇವು ಮೊಟ್ಟೆ ಎಲ್ಲಿ ಇಡುತ್ತವೆ, ಮರಿಗಳ ಪೋಷಣೆ ಹೇಗೆ ಮಾಡುತ್ತವೆ ಎಂಬುದು ಇನ್ನೂ ಕುತೂಹಲಕಾರಿ.

—ಎಚ್.ಆರ್. ದೇಸಾಯಿ ರಾಯಚೂರು, ಅಮೃತೇಶ ತಂಡರ ಅಣ್ಣಿಗೇರಿ, ಬಿ.ಎಂ.ಶಿವಲಿಂಗೇಗೌಡ ಚೇವಿನಹಳ್ಳಿ

### ಪತ್ರ, ಬರಹ ಅದ್ಭುತ

ವಂಡರ್‌ಪುಟದಲ್ಲಿ 'ಮ್ಯಾಟ್ರಿಮೋನಿಯಲ್ ಮರ' (ವಿದ್ಯಾ ಹಾಲಭಾವಿ) ಬರಹ ಓದಿ ಅಚ್ಚರಿ ತಂದಿತು.

—ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ

### ಸಂಗೀತಪ್ರಿಯರ ಆಶಯ

ಸೆಲೆಬ್ರಿಟಿ ಅಂಕಣದಲ್ಲಿ 'ಇಳಯರಾಜ ಎತ್ತಿದ ಪ್ರಶ್ನೆ' (ಹನಿ) ಲೇಖನದಲ್ಲಿ ವ್ಯಕ್ತವಾದ ಅಭಿಪ್ರಾಯದಂತೆ ಈ ಶೀತಲ ಸಮರದಲ್ಲಿ ಮಧ್ಯವರ್ತಿಗಳ ಪ್ರವೇಶ ವಾಗಿದೆಯೇ? ಎಸ್‌ಪಿಬಿ ಮತ್ತು ಇಳಯರಾಜ ಒಬ್ಬರನ್ನು ಬಿಟ್ಟು ಇನ್ನೊಬ್ಬರಿಲ್ಲ. ಇಂತಹ ಬೆಳವಣಿಗೆಗಳು ಸಂಗೀತ ಉದ್ಯಮ ಮತ್ತು ಗಾಯನ ಎರಡಕ್ಕೂ ಧಕ್ಕೆ ತರುತ್ತದೆ. ಸುಮಧುರ ಸಂಗೀತ ಆಲಿಸುವ ಲಕ್ಷಾಂತರ ಸಂಗೀತಪ್ರಿಯರ ಆಶಯ ಮಣ್ಣು ಪಾಲಾಗುವ ಅಪಾಯ ಇದೆ.

—ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ, ಗೌರಿಬಿದನೂರು ರಂಗಪ್ಪ ಬೆಂಗಳೂರು

### ಶೃಂಗಾರಕಲೆ

ಶಿಲ್ಪಗಳಲ್ಲಿ ಶೃಂಗಾರಕಲೆ (ಸುಧಾ ಹೆಗಡೆ) ಚಿತ್ರ ಲೇಖನ ಬಹಳ ಚೆನ್ನಾಗಿದೆ. ಶಿಲ್ಪ ಕೆತ್ತನೆಗಳು, ಕಲಾಕಾರನ ಕೈಚಳಕ ಕೂಡ ಸುಂದರವಾಗಿವೆ.

—ಲಲಿತರಾವ್ ಬೆಂಗಳೂರು, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ

### ಮನೋಜ್ಞ ಕಥೆ

'ದಾದಾಗಿರಿ' ಕಥೆ (ಬಿ.ಎಲ್.ವೇಣು) ಮನೋಜ್ಞವಾಗಿದೆ. ಕಡಲ ಕಿನಾರೆಗಳಲ್ಲಿ ನಡೆಯುವ ಘಟನೆಗಳ ತುಣುಕೊಂದನ್ನು ಆರಿಸಿಕೊಂಡು ಕಥೆ ಹೆಣೆಯಲಾಗಿದೆ. ಅಂತ್ಯವನ್ನು ಓದುಗರ ಕಲ್ಪನೆಗೆ ಬಿಟ್ಟಿರುವುದು ಕುತೂಹಲ ಹೆಚ್ಚಿಸಿದೆ.

—ಲಲಿತಾ ಅಂಬಾಗಿಲು ಉಡುಪಿ, ಪ.ಚಂದ್ರಕುಮಾರ ಗೌನಹಳ್ಳಿ
—ರಾಜಶೇಖರ ಹಾದಿಮನಿ ಧಾರವಾಡ, ಎಚ್.ಆನಂದಕುಮಾರ್ ಚಿತ್ರದುರ್ಗ

### ಯುಗಾದಿ ವಿಶೇಷಾಂಕ ವೈವಿಧ್ಯಮಯ



ಈ ಸಲದ 'ಸುಧಾ ಯುಗಾದಿ ವಿಶೇಷಾಂಕ' ತನ್ನ ವೈವಿಧ್ಯಮಯ ವಸ್ತುವಿಷಯದಿಂದಾಗಿ ಖುಷಿ ನೀಡಿತು. ವಿವೇಕ ರೈಯವರ ಲೇಖನ, ವಿಜು ಪೂಣಚ್ಚ ಅವರ ಕ್ರೀಡಾನೋಟ, ಬಹುಮಾನಿತ ಪ್ರಬಂಧಗಳು ಗುಣಮಟ್ಟದಿಂದಾಗಿ ಗಮನ ಸೆಳೆದವು. ಮೂಡ್ನಾಕೂಡು ಚಿನ್ನಸ್ವಾಮಿ ಅವರ ಕವಿತೆ ಇಷ್ಟವಾಯಿತು. ಕಾಸರವಳ್ಳಿ ಕುಟುಂಬದ ಸಂದರ್ಶನ ಕೂಡ ಮೂರು ವಿಭಿನ್ನ ದೃಷ್ಟಿಕೋನವನ್ನು ಪರಿಚಯಿಸುತ್ತದೆ. ಜಯಂತ ಕಾಯ್ಕಿಣಿಯವರ ಕಥೆ ಮೆಚ್ಚುವಂತಿದೆ.

—ಕೇಶವ ಮಳಗಿ ಬೆಂಗಳೂರು, ಕಾಳಿಹುಂಡಿ ಶಿವಕುಮಾರ್ ಮೈಸೂರು

**ಪ್ರಬಂಧ ಶೈಲಿ ಹಿಡಿಸಿತು**

ಸಂಚಿಕೆ ಬಹಳ ಸುಂದರವಾಗಿ ಮೂಡಿಬಂದಿದೆ. ಅದರಲ್ಲೂ ಎಲ್ಲ ಪ್ರಬಂಧಗಳು ಬಹಳ ಸೊಗಸಾಗಿವೆ. 'ಕೊಡೆಯರಳಿ ಹೂವಾಗಿ' ಪ್ರಬಂಧ (ಲಲಿತಾ ಹೊಸಪ್ಯಾಟಿ) ಬಹಳ ಹಿಡಿಸಿತು. ಬರವಣಿಗೆ ಶೈಲಿಯಂತೂ ಅದ್ಭುತ!

—ಶಾಂತವೀರಯ್ಯ ಹಲಗಲಿಮಠ ಬೇಲೂರು

**'ಮಹಿಳೆಯರ ಶಕ್ತಿ'**

ಪ್ರಬಂಧ ಸ್ಪರ್ಧೆಯಲ್ಲಿ ಎಲ್ಲ ಬಹುಮಾನ ಮಹಿಳೆಯರಿಗೆ, 'ಅವಳ ಹೆಜ್ಜೆ'ಯಲ್ಲಿ ಮಹಿಳೆಯರು ಬರೆದ ಲೇಖನಗಳನ್ನು ಓದಿದಾಗ 'ಮಹಿಳೆಯರ ಶಕ್ತಿ' ಎಷ್ಟಿದೆ ಎಂಬುದು ಅರಿವಾಗುತ್ತದೆ. ಸೊಗಸಾದ ಸಂಚಿಕೆ.

— ಬಿ.ಎಸ್. ಸೊಲ್ಲಾಪುರೆ ಕಮಲನಗರ

**ಮಾಹಿತಿಪೂರ್ಣ**

ಮನ್ಸೂರ ಸ್ವರ, ಹಿಂದೂಸ್ತಾನಿ ಗಾಯಕ ಪಂ. ರಾಜಶೇಖರ್ ಮನ್ಸೂರ ಅವರ ಸಂಗೀತ ಪಯಣ ಕುರಿತ ಬರಹ (ಉಮಾ ಅನಂತ್) ಮಾಹಿತಿಪೂರ್ಣವಾಗಿದೆ.

—ಡಿ. ಬಾಲಕೃಷ್ಣ ಬೆಂಗಳೂರು




◆ ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
◆ ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
◆ ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.
ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ